



(6ನೇ ಪುಟದಿಂದ)

'ಅವುಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ತಾಳ್ಮೆ ಹಾಗೂ ಸಂಯಮ ಬೇಕು. ಕೆಲವು ಚಿತ್ರಗಳಿಗೆ ದಿನವಿಡೀ ಅವುಗಳ ಸುತ್ತ ತಿರುಗಿದ್ದೂ ಇದೆ. ಕೀಟಗಳ ಛಾಯಾಗ್ರಹಣದ ಸವಾಲನ್ನು ಸ್ವೀಕರಿಸುವವರು ಕಡಿಮೆ. ಅದಕ್ಕಾಗಿ ಈ ಕ್ಷೇತ್ರವನ್ನೇ ಆರಿಸಿಕೊಂಡೆ' ಎನ್ನುತ್ತಾರೆ ಸಚಿನ್.

ಸಚಿನ್ ಅವರ ಕೀಟಚಿತ್ರಗಳ ಏಕವ್ಯಕ್ತಿ ಪ್ರದರ್ಶನವು ಮಂಗಳೂರಿನ ಹಸ್ತಾ ಗ್ಯಾಲರಿಯಲ್ಲಿ ನಡೆದಿದೆ. ಜನವರಿ 3ರಿಂದ 9ರ ತನಕ ಕೇರಳದ ತಿರುವನಂತಪುರದ ವೈಲೊಪ್ಪಿಯಲ್ಲಿ ಕೇರಳ ಸರ್ಕಾರದ ಲಲಿತಕಲಾ ಅಕಾಡೆಮಿ ಪ್ರಾಯೋಜಕತ್ವದಲ್ಲಿ ಸಚಿನ್‌ರ 17 ಕೀಟ ಛಾಯಾಚಿತ್ರಗಳು ಪ್ರದರ್ಶಿತವಾಗಿದೆ. ನಮ್ಮ ಪರಿಸರದಲ್ಲಿಯೇ ಇರುವ ಕೀಟಗಳ ಜೀವನ ಶೈಲಿ ಹಾಗೂ ಅದರ ದೈಹಿಕ ರಚನೆ, ಬದುಕಿನ ಹಂತಗಳ ಬಗ್ಗೆ ಅಧ್ಯಯನ ನಡೆಸುವ ಇರಾದೆ ಸಚಿನ್‌ರದ್ದು. ಇವರ ಸಂಗ್ರಹದಲ್ಲಿ ಢಿಫೆನ್ಸಿವ್ ಸ್ಪೈಡರ್, ಬಗ್ಸ್, ವೀವರ್ ಆ್ಯಂಟ್, ಟೈಗರ್ ಬಟರ್ ಫ್ಲೈ, ಸ್ಪೈಡರ್ ರೋಬರ್ ಫ್ಲೈ, ಜೈಂಟ್ ಬ್ಯಾಟಲ್ ಸೇರಿದಂತೆ ಸುಮಾರು 80 ಕೀಟ ಪ್ರಬೇಧಗಳ ಛಾಯಾಚಿತ್ರಗಳಿವೆ.

ಕೀಟಗಳ ಛಾಯಾಚಿತ್ರದಲ್ಲಿ ಇನ್ನೂ ಹೆಚ್ಚು ಕಲಿಯುವ ಇರಾದೆ ಇವರಿಗೆ ಇದೆ. ಕೀಟಗಳ ದೈನಂದಿನ ಚಲನವಲನ ಅಭ್ಯಸಿಸುವ ಮತ್ತು ದಾಖಲಿಸುವ ಬಗ್ಗೆಯೂ ಯೋಜನೆ ಇದೆ. ಈ ಮೆಗಾ ಬದುಕಿನಲ್ಲಿ ಎಲ್ಲರಿಂದಲೂ ನಿರ್ಲಕ್ಷಿಸಲ್ಪಡುವ ಕೀಟ ಜಗತ್ತನ್ನು ಜಗತ್ತಿಗೆ ಪರಿಚಯಿಸುತ್ತಿರುವ ಸಚಿನ್ ಸಾಧನೆ ಕುತೂಹಲಕರ. ಸಂಪರ್ಕಿಸುವವರಿಗೆ ದೂರವಾಣಿ ಸಂಖ್ಯೆ– 09886349811.

